# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

# ಎಸ್.ಸಿ. ನಂ.89/2020

ಚಾಸಾಃ 24 ಪ್ರಾಸಾಃ 12

## ದಿನಾಂಕ 12.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಡಾಃ ರುದ್ರಮೂರ್ತಿ ಎಸ್ |
| ತಂದೆಯ ಹೆಸರು | ಹೆಚ್ ಸಿದ್ದರಾಜು |
| ವಯಸ್ಸು | 62 ವರ್ಷ |
| ಕೆಲಸ | ನಿವೃತ್ತ ವೈದ್ಯಾಧೀಕಾರಿ |
| ವಾಸಸ್ಥಳ | ಬೆಂಗಳೂರು |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಜೂನ್ -2010 ರಿಂದ ಮೇ 2021 ರವರಿಗೆ ಜಿಲ್ಲಾ ಆಸ್ಪತ್ರೆ , ತುಮಕೂರಿನಲ್ಲಿ ಹಿರಿಯ ವೈದ್ಯನ್ಯಾಯಶಾಸ್ತ್ರ ತಜ್ಞನಾಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿ 30-01-2020 ರಂದು ಕ್ಯಾತ್ಸಂದ್ರ ವೃತ್ತ ನಿರೀಕ್ಷಕರ ಕೋರಿಕೆಯಂತೆ ಕ್ರೈಮ್ ನಂ.28/2020 U/sec.302, 201, IPC ಪಾಲನೇತ್ರಯ್ಯ ಎಂಬ 30 ವರ್ಷ ವಯಸ್ಸಿನ ಗಂಡಸಿನ ಮರಣೋತ್ತರ ಶವಪರೀಕ್ಷೆಯನ್ನು ಅದೇ ದಿನ ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ಅವಧಿಯಲ್ಲಿ ಜಿಲ್ಲಾ ಆಸ್ಪತ್ರೆ ,ತುಮಕೂರಿನ ಶವಗಾರದಲ್ಲಿ ನೇರವೇರಿಸಲಾಯಿತು.

3) ಶವವನ್ನು ಶೀಥಲಿಕರಣ ಪೆಟ್ಟಿಗೆಯಲ್ಲಿ ಇಡಲಾಗಿತ್ತು. ಶವದ ಮೇಲೆ ಕೆಳಕಂಡ ಬಟ್ಟೆಗಳು ಇದ್ದವು.

1) ರಕ್ತದ ಕಲೆಗಳಿಂದ ಕೂಡಿದ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್

2)ರಕ್ತದ ಕಲೆಗಳಿಂದ ಕೂಡಿದ ಗಡಸು ಬಣ್ಣದ ತುಂಬು ತೋಳಿನ ಶರಟ್

3) ರಕ್ತದ ಕಲೆಗಳಿಂದ ಕೂಡಿದ ಹಸಿರು ಬಣ್ಣದ ಅಂಡರ್ ವೇರ್

4) ಕಪ್ಪು ಬಣ್ಣದ ಉಡುದಾರ

5) ಕೆಂಪು ಬಣ್ಣದ ದಾರ

ಈ ಎಲ್ಲಾ ವಸ್ತುಗಳನ್ನು ಸಂಬಂದಪಟ್ಟ ಆರಕ್ಷಕರಿಗೆ ಮೊಹರು ಮಾಡದ ಸ್ಥಿತಿಯಲ್ಲಿ ಹಿಂದಿರುಗಿಸಲಾಯಿತು.

4)ಶವದ ಉದ್ದವು 180 ಸೆಂ ಮೀ ಆಗಿದ್ದು , ಸಾದಾರಣ ಮೈಕಟ್ಟಿನಿಂದ ಕೂಡಿದ್ದು , ಸೆಟೆಯುವಿಕೆಯು ದೇಹದ ಎಲ್ಲಾ ಭಾಗಗಳಲ್ಲಿ ಕಂಡು ಬಂದಿತ್ತು. ಮರಣೋತ್ತರ ಕಲೆಗಳು ದೇಹದ ಹಿಂಭಾಗದಲ್ಲಿ ಇದ್ದು ಮುಖ , ಕತ್ತು , ಎದೆ , 2 ಕೈಗಳು ಹಾಗೂ ಬಲಗಾಲುಗಳು ಒಣಗಿದ ರಕ್ತದ ಕಲೆಗಳಿಂದ ಕೂಡಿತು.

5) ಶವದ ಮೇಲೆ ಕೆಳಕಂಡ ಹೊರಗಾಯಗಳು ಇದ್ದವು.

1) 13 x 1 cm x ಕೆಳಗಿನ ಮೂಳೆ ಮುರಿದಿದ್ದ ಕೊಚ್ಚಿದ ಗಾಯವು ತಲೆಯ ಹಿಂಭಾಗದಲ್ಲಿ ಇತ್ತು.

2) 5 x 1 , 4.5 x1, 5 x 0.5 x ಕೆಳಗಿನ ಮೂಳೆಗಳು ಮುರಿದಂತಹ ಕೊಚ್ಚಿದ ಗಾಯವು ಮೇಲೆ ಇದ್ದ ಗಾಯದ ಕೆಳಗೆ ಇದ್ದವು.

3) 7x 1 ಹಾಗೂ 5 x 1 ಅಳತೆಯ 2 ಕೊಚ್ಚಿದ ಗಾಯಗಳು ತಲೆಯ ಬಲಭಾಗದಲ್ಲಿ ಇದ್ದು ಅದರ ಕೆಳಗಿನ ಮೂಳೆಗಳು ಮುರಿದಿದ್ದವು ಹಾಗೂ ಈ ಗಾಯಗಳು ಒಂದರ ಕೆಳಗೆ ಒಂದು ಇದ್ದವು.

4) 6 x 1 cm ಅಳತೆಯ ಕೊಚ್ಚಿದ ಗಾಯವು ತಲೆಯ ಮುಂಭಾಗ ಮತ್ತು ಬಲಭಾಗದಲ್ಲಿ ಇದ್ದು ಅದರ ಮೂಳೆಗಳು ಮುರಿದಿತ್ತು.

5.)3 x 0.5 cm ನಿಂದ 7 x 0.5 cm ಅಳತೆಯ 6 ಊತದಿಂದ ಕೂಡಿದ ತರಚಿದ ಗಾಯವು ಬೆನ್ನು ಹಾಗೂ ಹೊಟ್ಟೆಯ ಹಿಂಭಾಗದಲ್ಲಿ ಇದ್ದವು.

6) 1 x 0.5 ನಿಂದ 8 x 0.5 ಅಳತೆಯ 4 ಊತದಿಂದ ಕೂಡಿದ ತರಚಿದ ಗಾಯವು ಬಲತೊಡೆಯ ಹೊರಭಾಗದಲ್ಲಿ ಇತ್ತು.

7) 4 x 0.2 cm ಅಳತೆಯ ಊತದಿಂದ ಕೂಡಿದ ತರಚಿದ ಗಾಯವು ಬಲಮಂಡಿಯ ಮೇಲೆ ಇತ್ತು.

8) 2 x 0.5 cm x ಮಾಂಸ ಕಂಡ ಆಳದ ತಿವಿದ ಗಾಯವು ಬಲಗಾಲಿನಲ್ಲಿ ಕಂಡು ಬಂದಿತು.

9) 2 x 0.5 cm x ಮೂಳೆ ಆಳದ ತಿವಿದ ಗಾಯವು ಬಲಮುಂಗೈನ ಮೇಲೆ

10) 1.5 x 0.5 x ಮಾಂಸ ಕಂಡ ಆಳದ ತಿವಿದ ಗಾಯವು ಬಲ ಕೈನ ಹೊರಭಾಗದಲ್ಲಿ ಇತ್ತು.

6) ಶವವನ್ನು ಛೇದಿಸಿ ನೋಡಲಾಗಿ ಃ-

ತಲೆ ಬುರುಡೆ ಚರ್ಮಕ್ಕೆ ಆದ ಗಾಯಗಳನ್ನು ಈಗಾಗಲೇ ನಮೂದಿಸಿದ್ದು ಅದರ ಒಳಭಾಗದಲ್ಲಿ ನೀಲಿ ಗಟ್ಟಿದ ಗಾಯದಿಂದ ಕೂಡಿರುವುದು ಕಂಡು ಬಂದಿತು. ತಲೆ ಬುರುಡೆ ಮೂಳೆಗಳು ಅನೇಕ ಜಾಗಗಳಲ್ಲಿ ಮುರಿದಿದ್ದು ಕಂಡು ಬಂದಿತು. ಮೆದುಳಿನ ಪೊರೆಗಳು ಸುಸ್ಥಿತಿಯಲ್ಲಿ ಇದ್ದವು. ಮೆದುಳು ಗಡಸು ಆಗಿದ್ದು ರಕ್ತಸ್ರಾವವದಿಂದ ಕೂಡಿತ್ತು.

7. ಎದೆಗೂಡಿನ ಹೊರಭಾಗದಲ್ಲಿ ಇದ್ದಂತಹ ಗಾಯಗಳನ್ನು ಈಗಾಗಲೇ ನಮೂದಿಸಿದ್ದು ಎದೆಗೂಡಿನ ಪಕ್ಕೆಲುಬುಗಳು ಸುಸ್ಥಿತಿಯಲ್ಲಿ ಇದ್ದವು.

8) ಶ್ವಾಸಕೋಶವರಣ, ಧ್ವನಿಪೆಟ್ಟಿಗೆ ,ಶ್ವಾಸನಾಳ ಹಾಗೂ ಎರಡು ಶ್ವಾಸಕೋಶಗಳು ಸುಸ್ಥಿತಿಯಲ್ಲಿ ಇದ್ದು ಬಿಳುಚಿಕೊಂಡಿರುತ್ತದೆ. ಹೃದಯವಾರಣ , ಹೃದಯ ಹಾಗೂ ದೊಡ್ಡ ರಕ್ತನಾಳಗಳು ಸುಸ್ಥಿತಿಯಲ್ಲಿ ಇರುತ್ತದೆ ಹಾಗೂ ಹೃದಯದ ಕವಟಗಳನ್ನು ಕಡಿಮೆ ಪ್ರಮಾಣದಲ್ಲಿ ರಕ್ತ ಇರುತ್ತದೆ.

9) ಹೊಟ್ಟೆಯ ಹೊರಭಾಗದಲ್ಲಿ ಇದ್ದಂತಹ ಗಾಯಗಳನ್ನು ಈಗಾಗಲೇ ನಮೂದು ಮಾಡಲಾಗಿದ್ದು , ಹೊಟ್ಟೆಯ ಒಳಭಾಗ , ಬಾಯಿ, ಗಂಟಲು ಹಾಗೂ ಅನ್ನನಾಳಗಳು ಸುಸ್ಥಿತಿಯಲ್ಲಿ ಇದ್ದು ಬಿಳುಚಿಕೊಂಡಿರುತ್ತದೆ. ಜಠರದಲ್ಲಿ ಅರ್ಧದಷ್ಟು ಭಾಗಾಂಶ ಜೀರ್ಣವಾದ ಊಟವಿದ್ದು , ಮದ್ಯಸಾರದ ವಾಸನೆಯಿಂದ ಕೂಡಿರುತ್ತದೆ. ಚಿಕ್ಕ ಹಾಗೂ ದೊಡ್ಡ ಕರಳುಗಳು ಸುಸ್ಥಿತಿಯಲ್ಲಿ ಇದ್ದು ಗಾಳಿಯಿಂದ ಕೂಡಿರುತ್ತದೆ. ಪಿತ್ತಜನಕಾಂಗ ಹಾಗೂ ಗುಲ್ಮ ಸುಸ್ಥಿತಿಯಲ್ಲಿದ್ದು ಬಿಳುಚಿಕೊಂಡಿರುತ್ತದೆ.

10) ಎರಡು ಮೂತ್ರಜನಾಂಕಾಗಂಗಳು ಸುಸ್ಥಿತಿಯಲ್ಲಿದ್ದು ಬಿಳುಚಿಕೊಂಡಿರುತ್ತದೆ. ಮೂತ್ರಕೋಶವು ಖಾಲಿ ಇರುತ್ತದೆ. ಹೊರಗಿನ ಮತ್ತು ಒಳಗಿನ ಸಂತಾನಾಭಿವೃದ್ಧಿ ಅಂಗಂಗಳು ಸುಸ್ಥಿತಿಯಲ್ಲಿರುತ್ತದೆ.

11) ಶವದಿಂದ ರಕ್ತದ ಮಾದರಿಯನ್ನು ಶೇಖರಿಸಿ ಮೊಹರು ಮಾಡಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂದಪಟ್ಟ ಆರಕ್ಷಕರಿಗೆ ನೀಡಲಾಗಿರುತ್ತದೆ.

12) ಹತ್ತಿಯಲ್ಲಿ ಮೃತ ದೇಹದಲ್ಲಿ ಇದ್ದ ರಕ್ತವನ್ನು ಶೇಖರಿಸಿ ಒಣಗಿಸಿ ಮೊಹರು ಮಾಡಿ ಸಂಬಂದಪಟ್ಟ ಆರಕ್ಷಕರಿಗೆ ರಕ್ತದ ವರ್ಗೀಕರಣಕ್ಕಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಪಟ್ಟ ಆರಕ್ಷಕರಿಗೆ ನೀಡಲಾಯಿತು.

13) ಮೃತ ದೇಹದಲ್ಲಿ ಕಂಡು ಬಂದಂತಹ ಎಲ್ಲಾ ಗಾಯಗಳು ಮರಣಪೂರ್ವಗಾಯಗಳು ಆಗಿದ್ದು ಹಾಗೂ ಆ ಗಾಯಗಳು ಮರಣದ ಸಮಯಕ್ಕೆ ತಾಜಾ ಗಾಯಗಳು ಆಗಿರುತ್ತದೆ.

14) ಮೃತದೇಹದಲ್ಲಿ ಕಂಡು ಬಂದಂತಹ ಗಾಯಗಳು ಹರಿತವಾದ ಹಾಗೂ ಭಾರವಾದ ಆಯುಧದಿಂದ ಆಗಿರುವ ಸಾಧ್ಯತೆಗಳು ಇರುತ್ತವೆ.

15) ಶವವನ್ನು ಶೀಥಲಿಕರಣ ಪೆಟ್ಟಿಗೆಯಲ್ಲಿ ಇಟ್ಟ ಕಾರಣ ಮರಣದ ಸಮಯದ ಬಗ್ಗೆ ಅಭಿಪ್ರಾಯ ನೀಡಲು ಬರುವುದಿಲ್ಲ.

16) ನನ್ನ ಅಭಿಪ್ರಾಯದಲ್ಲಿ ಮೃತ ವ್ಯಕ್ತಿಗೆ ಆದ ಅನೇಕ ಗಾಯಗಳ ಪರಿಣಾಮವಾಗಿ ರಕ್ತಸ್ರಾವ ಹಾಗೂ ಅಘಾತದಿಂದ ಸಾವು ಸಂಬಂವಿಸಿರುವುದಾಗಿ ತಾತ್ಕಲಿಕ ಅಭಿಪ್ರಾಯನೀಡಿ ಶವಪರೀಕ್ಷ ವರದಿಯನ್ನು ನೀಡಿರುತ್ತೇನೆ. ಶವಪರೀಕ್ಷ ವರದಿಯನ್ನು ನಿಪಿ-19 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮೈಯ ಮೇಲಿನ ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ರಿಂದ 5 ಎಂದು ಗುರುಸಲಾಗಿದೆ.

17) ಕ್ಯಾತ್ಸಂದ್ರ ವೃತ್ತ ನಿರೀಕ್ಷಕರು, ತುಮಕೂರು ಇವರು ದಿ 10-08-2020 ರ ದಿನಾಂಕವಿರುವ ಒಂದು ಮನವಿಯನ್ನು ಹಾಗೂ ಒಂದು ಆಯುಧವನ್ನು ಕಳುಹಿಸಿದ್ದು ಅದನ್ನು ಪರೀಕ್ಷೆ ಮಾಡಿ ವರದಿಯನ್ನು ನೀಡುವಂತೆ ದಿ 11-08-2020 ರಂದು ನಾನು

ಸ್ವೀಕರಿಸಿರುತ್ತೇನೆ, ಅದೇ ದಿನ ನಾನು ಆಯುಧವನ್ನು ಪರೀಕ್ಷೆಮಾಡಿದಾಗ ಆ ಆಯುಧವು ಮೊಹರು ಮಾಡಿದ ಸ್ಥಿತಿಯಲ್ಲಿ ಇದ್ದು ಅದರ ಮೇಲೆ ಎಫ್ ಎಸ್ ಎಲ್ ಸೀಲ್ ಇರುವುದು ಕಂಡು ಬಂದಿತು ಮತ್ತು ಅದರ ಮೇಲೆ ಇದ್ದ ಸೀಲ್ ಗಳು ಸುಸ್ಥಿತಿಯಲ್ಲಿ ಇದ್ದವು.

18) ಸೀಲ್ ನ್ನು ತೆಗೆದು ನೋಡಿದಾಗ ಅದರ ಒಳಗೆ ಒಂದು ಪ್ಲಾಸ್ಟಿಕ್ ಹಿಡಿಕೆ ಇರುವ ಕಬ್ಬಿಣದ ಉದ್ದ ಮಚ್ಚು ಇದ್ದು , ಅದರ ಉದ್ದವು 54 ಸೆಂ ಮೀ ಗಳಾಗಿರುತ್ತದೆ. ಹಿಡಿಕೆ ಉದ್ದವು 20 ಸೆಂಮೀ ಇದ್ದು ಅದರ ಸುತ್ತಳತೆಯು 9 ಸೆಂಮೀಗಳಾಗಿರುತ್ತದೆ. ಆಯುಧದ ಹಲಿಗೆಯ ಉದ್ದವು 34 ಸೆಂಮೀಗಳಾಗಿದ್ದು ಅದರ ಅಗಲವು 4 ಸೆಂಮೀಗಳಾಗಿರುತ್ತದೆ. ಅದರ ಒಂದು ಬದಿಯ ಮೊಂಡದ ಬದಿಯು 0.75 ಸೆಂಮೀ ಇರುತ್ತದೆ. ಇನ್ನೊಂದು ಬದಿಯು ಚೂಪಾಗಿರುತ್ತದೆ. ಈ ಹಲಗೆಯು ಒಂದು ತುದಿಯಲ್ಲಿ ಆರಂಭದಲ್ಲಿ 4 ಇಂಚು ಇದ್ದು ಕೊನೆಯಲ್ಲಿ ಬರುವಷ್ಟರಲ್ಲಿ ಕಡಿಮೆಯಾಗುತ್ತ ಬಂದು ಅದರ ಅಗಲವು ಕ್ಷೀಣಿಸುತ್ತದೆ . ಹಲಗೆಯ 2 ಬದಿಗಳಲ್ಲಿ ಅಲ್ಲಲ್ಲಿ ಕೆಂಪು ಮಿಶ್ರಿತ ಕಂದು ಬಣ್ಣದ ಕಲೆಗಳಿಂದ ಕೂಡಿರುತ್ತದೆ.

19) ನನ್ನ ಅಭಿಪ್ರಾಯದಲ್ಲಿ ಮೃತ ವ್ಯಕ್ತಿಗೆ ಆದ 1 ರಿಂದ 10 ಹೊರಗಾಯಗಳು ಹಾಗೂ ಅದಕ್ಕೆ ಸಂಬಂದಪಟ್ಟ ಎಲ್ಲಾ ಒಳಗಾಯಗಳು ನಾನು ಪರೀಕ್ಷೆ ಮಾಡಿದ ಆಯುಧದಿಂದ ಆಗುವ ಸಾಧ್ಯತೆಗಳು ಇರುವುದಾಗಿ ಅಭಿಪ್ರಾಯಪಟ್ಟು ಆಯುಧವನ್ನು ಮೊಹರು ಮಾಡಿ ಮಾದರಿ ಸಹಿಯೊಂದಿಗೆ ನನ್ನ ವರದಿಯನ್ನು ಸಂಬಂದಪಟ್ಟ ಆರಕ್ಷಕರಿಗೆ ಮಾದರಿ ಸಹಿಯೊಂದಿಗೆ ಮೊಹರು ಮಾಡಿ ನೀಡಿರುತ್ತೇನೆ. ಆಯುಧದ ಬಗ್ಗೆ ನೀಡಿದ ಅಭಿಪ್ರಾಯವನ್ನು ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

20) ದಿ 11-08-2020 ರಂದು ಕ್ಯಾತ್ಸಂದ್ರ ವೃತ್ತ ನಿರೀಕ್ಷಕರು ನೀಡಿದಂತಹ ಮನವಿ ಪತ್ರ ಹಾಗೂ ಎಫ್ ಎಸ್ ಎಲ್ ವರದಿಗಳನ್ನು ಕಳುಹಿಸಿದ್ದು, ಅಂತಿಮ ಅಭಿಪ್ರಾಯವನ್ನು ಕೋರಿರುತ್ತಾರೆ. ಅದರಂತೆ ನಾನು ಶವಪರೀಕ್ಷ ವರದಿ ಹಾಗೂ ಎಫ್ ಎಸ್ ಎಲ್ ವರದಿಯನ್ನು ಪರಿಶೀಲಿಸಿ ನನ್ನ ಅಂತಿಮ ಅಭಿಪ್ರಾಯವನ್ನು ಮೃತ ವ್ಯಕ್ತಿಗೆ ಆದ ಅನೇಕ ಗಾಯಗಳ ಪರಿಣಾಮವಾಗಿ ರಕ್ತಸ್ರಾವ ಹಾಗೂ ಅಘಾತದಿಂದ ಸಾವು ಸಂಬಂವಿಸಿರುವುದಾಗಿ ಹಾಗೂ ಮರಣದ ಸಮಯಕ್ಕೆ ಮೃತವ್ಯಕ್ತಿಯು ಮದ್ಯಸಾರವನ್ನು ಸೇವಿಸಿರುವುದಾಗಿ ಅಭಿಪ್ರಾಯ ನೀಡಿ ಅಂತಿಮ ಅಭಿಪ್ರಾಯವನ್ನು ನೀಡಿರುತ್ತೇನೆ. ಅಂತಿಮ ಅಭಿಪ್ರಾಯವನ್ನು ನಿಪಿ-21 ಎಂದು,ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. 2 ಎಫ್ ಎಸ್ ಎಲ್ ವರದಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-22 ಮತ್ತು ನಿಪಿ-23 ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದೆ ಇರುವ ಮಚ್ಚನ್ನು ಪರಿಶೀಲಿಸಿ ಪೊಲೀಸರಿಗೆ ಅಂತಿಮ ಅಭಿಪ್ರಾಯವನ್ನು ನೀಡಿರುತ್ತೇನೆ . ಮಚ್ಚನ್ನು ಈಗಾಗಲೇ ಮುಮಾ-9 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಮುಮಾ-9 ರಿಂದ ಒಬ್ಬ ವ್ಯಕ್ತಿಗೆ ಹಲ್ಲೆ ಮಾಡಿದಾಗ ಗಾಯಗಳು ಸಂಬಂವಿಸಿ ಸಾವು ಸಂಬಂವಿಸುವ ಸಾಧ್ಯತೆಗಳು ಇರುತ್ತದೆ.

**<u>ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆಹೆಚ್ ಜಿ ವಕೀಲರಿಂದ ಃ-</u>**

21) ನನ್ನ ಮರಣೋತ್ತರ ಪರೀಕ್ಷೆಯಲ್ಲಿ 10 ಹೊರಗಾಯಗಳು ಆಗಿದೆ ಎಂದು ನಮೂದಿಸಿರುತ್ತೇನೆ ಅಂದರೆ ಸರಿ. ಶವತನಿಖೆಯ ಕಾಲದಲ್ಲಿ ನಾನು ಇದ್ದೆ ಅಂದರೆ ಸರಿಯಲ್ಲ. ನಾನು ಶವಪರೀಕ್ಷೆಯ ಸಮಯದಲ್ಲಿ ನಮೂದಿಸಿರುವ 8 ಮತ್ತು 9 ಹೊರಗಾಯಗಳು ಮುಮಾ-9 ರಿಂದ ಆಗಲು ಸಾಧ್ಯವಿಲ್ಲ ಅಂದರೆ ಸರಿಯಲ್ಲ . ಈ

ಪ್ರಕರಣದಲ್ಲಿ ಸದರಿ ಗಾಯಗಳು ಒಂದು ಚಾಕುವಿನಿಂದ ಚುಚ್ಚಿದರೆ ಸಂಬಂವಿಸುತ್ತದೆ ಅಂದರೆ ಸರಿಯಲ್ಲ. ನಾನು ಹೊರಗಾಯಗಳು ಆಗಿ ನಮೂದಿಸಿರುವ 10 ಗಾಯಗಳು ಆಕಾರ ಇಲ್ಲದಿರುವ ಕಾರಣ ನಾನು ನಮೂದಿಸಿರುವುದಿಲ್ಲ. ಒಬ್ಬ ವ್ಯಕ್ತಿಯು ಎತ್ತರ ಪ್ರದೇಶದಿಂದ ಹಿಮ್ಮುಖವಾಗಿ ಆಯಾತಪ್ಪಿ ಬಿದ್ದಾಗ ಈ ಪ್ರಕರಣದಲ್ಲಿ ಆಗಿರುವ ಗಾಯಗಳು ಸಂಬಂವಿಸುವ ಸಾಧ್ಯತೆ ಇಲ್ಲ. ನಾನು ಶವಪರೀಕ್ಷೆ ನಡೆಸುವ ಸಮಯದಲ್ಲಿ ಪೊಲೀಸರು ಮುಮಾ-9 ರ ಆಯುಧವನ್ನು ಹಾಜರುಪಡಿಸಿರಲಿಲ್ಲ. ನಾನು ಶವಪರೀಕ್ಷೆ ಸಮಯದಲ್ಲಿ ಶವದ ಬಟ್ಟೆಗಳನ್ನು ಸಂಗ್ರಹಿಸುವ ಸಮಯದಲ್ಲಿ ಹರಿದ ಮತ್ತು ಚುಚ್ಚಿದ ನಿಶಾನೆಗಳನ್ನು ನಮೂದಿಸಿರುವುದಿಲ್ಲ. ನಾನು ಪೊಲೀಸರು ಶಾರಿಕ್ ಆಗಿ ಮುಮಾ-9 ರ ಆಯುಧವನ್ನು ಗಾಯಗಳು ಆಗಿ ಆದ್ದರಿಂದ ಸಾವು ಸಂಬಂವಿಸಿದೆಯೆಂದು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

22) ನಾನು ಅಂತಿಮ ಅಭಿಪ್ರಾಯವನ್ನು ನೀಡುವ ಸಮಯದಲ್ಲಿ ಮುಮಾ-9 ರ ಹಿಡಿಯು ಪ್ಲಾಸ್ಟಿಕ್ ಹಿಡಿ ಎಂದು ನಮೂದಿಸಿದ್ದೇನೆ ಆದರೆ ಯಾವ ಬಣ್ಣವೆಂದು ನಮೂದಿಸಿಲ್ಲ ಅಂದರೆ ಸರಿ. ನಾನು ಮತ್ತು ಪೊಲೀಸರು ಶಾರಿಕ್ ಆಗಿ ಸುಳ್ಳು ವರದಿಯನ್ನು ತಯಾರಿಸಿ ಸುಳ್ಳು ಅಭಿಪ್ರಾಯವನ್ನು ನೀಡಿದ್ದೇನೆ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.